1	2	3	4
2	ಬೆಂಗಳೂರು (ಗ್ರಾ)	288	32975
3	ಬೆಳಗಾಂ	5099	14650
4	ಬಳ್ಳಾರಿ	2402	28
5	ಬೀದರ್	1336	0
6	ಬಿಜಾಪುರ	3756	1750
7	ಬಾಗಲಕೋಟೆ	20599	9918
8	ಚಿಕ್ಕಮಗಳೂರು	218	0
9	ಚಿತ್ರದುರ್ಗ	3425	14
10	ದಾವಣಗೆರೆ	3426	30
11	ದಕ್ಷಿಣಕನ್ನಡ	721	4
12	ಉಡುಪಿ	721	6
13	ಧಾರವಾಡ	891	230
14	ಗದಗ್	4012	1081
15	ಹಾವೇರಿ	4016	1086
16	ಗುಲ್ಬರ್ಗ	3525	34
17	ಹಾಸನ	962	0
18	ಕೊಡಗು	28	0
19	ಕೋಲಾರ	1827	256
20	ಮಂಡ್ಯ	238	30
21	ಮೈಸೂರು	680	101
22	ಚಾಮರಾಜನಗರ	684	104
23	ರಾಯಚೂರು	274	89
24	ಕೊಪ್ಪಳ	1499	356
25	ಶಿವಮೊಗ್ಗ	1026	0
26	ತುಮಕೂರು	6426	472
27	ಉತ್ತರ ಕನ್ನಡ	74	31
	ಒಟ್ಟು	76605	88566

ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು

235 (563) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಖಾಸಗಿ ಹಾಗೂ ಸಹಕಾರ ಕ್ಷೇತ್ರದಲ್ಲಿ ಬರುವ ಸಕ್ಕರೆ ಕಾರ್ಖಾನೆಗಳೆಷ್ಟು ಜಿಲ್ಲಾವಾರು ವಿವರವನ್ನು ಪ್ರತ್ಯೇಕವಾಗಿ ನೀಡುವುದು

ಆ) ಈ ವರ್ಷ ಹೊಸದಾಗಿ ಆರಂಭಿಸಲು ಎಷ್ಟು ಸಕ್ಕರೆ ಕಾರ್ಖಾನೆಗಳಿಗೆ ಪರವಾನಿಗೆ ನೀಡಲಾಗಿದೆ ವಿವರಗಳನ್ನು ನೀಡುವುದು

ಇ) ರಾಜ್ಯದಲ್ಲಿನ ಎಲ್ಲಾ ಸಕ್ಕರೆ ಕಾರ್ಖಾನೆಗಳ ಸ್ಥಾಪಿತ ಉತ್ಪಾದನಾ ಸಾಮರ್ಥ್ಯ ಮತ್ತು ಹಾಲಿ ಉತ್ಪಾದಿಸುತ್ತಿರುವ ಸಕ್ಕರೆಯ ಪ್ರಮಾಣ ಎಷ್ಟು ಎಲ್ಲಾ ಕಾರ್ಖಾನೆಗಳು ಗರಿಷ್ಟ ಉತ್ಪಾದನಾ ಸಾಮರ್ಥ್ಯಕ್ಕೆ ಅನುಗುಣವಾಗಿ ಕಾರ್ಯ ನಿರ್ವಹಿಸುತ್ತಿದೆಯೇ

ಈ) ರಾಜ್ಯದಲ್ಲಿ ದಾಸ್ತಾನಿರುವ ಒಟ್ಟು ಸಕ್ಕರೆಯ ಪ್ರಮಾಣವೆಷ್ಟು?

ಉ) ಎಲ್ಲಾ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ನಿಯಮಿತವಾಗಿ ಹಣವನ್ನು ಪಾವತಿಸುತ್ತಿವೆಯೆ ಹಾಗಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಊ) ಅನೇಕ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಹಣ ಪಾವತಿಸದೆ ಅನಗತ್ಯ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ರೈತರ ಹಣ ಬಾಕಿ ಉಳಿಸಿಕೊಂಡಿವೆ?

ಶ್ರೀ ಎಂ ಮಹಾದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 43 ಸಕ್ಕರೆ ಕಾರ್ಖಾನೆಗಳು ಇದ್ದು ಇವುಗಳಲ್ಲಿ ಸಹಕಾರಿ ರಂಗದಲ್ಲಿ 21 ಸಕ್ಕರೆ ಕಾರ್ಖಾನೆಗಳಿವೆ ಖಾಸಗಿ ವಲಯದಲ್ಲಿ 19 ಸಕ್ಕರೆ ಕಾರ್ಖಾನೆಗಳಿವೆ ಹಾಗೂ ಸರ್ಕಾರಿ ಜಂಟಿ ವಲಯದಲ್ಲಿ 3 ಸಕ್ಕರೆ ಕಾರ್ಖಾನೆಗಳು ಇರುತ್ತದೆ ಜಿಲ್ಲಾವಾರು ವಿವರ ಈ ಕೆಳಕಂಡಂತೆ ಇರುತ್ತದೆ

ಬೀದರ್	03	ಮಂಡ್ಯ	04
ಗುಲ್ಬರ್ಗ	01	ದಾವಣಗೆರೆ	03
ಬಿಜಾಪುರ	01	ಹಾಸನ	01
ಬಾಗಲಕೋಟೆ	06	ಕೊಪ್ಪಳ	01
ಬೆಳಗಾಂ	12	ಬಳ್ಳಾರಿ	03
ಹಾವೇರಿ	01	ಚಿತ್ರದುರ್ಗ	01
ಶಿವಮೊಗ್ಗ	01	ಉಡುಪಿ	01
ಮೈಸೂರು	02	ಕೋಲಾರ	01
ಚಾಮರಾಜನಗರ	01	ಒಟ್ಟು	43

ಆ) ಈ ವರ್ಷ ಹೊಸ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಸರ್ಕಾರದಿಂದ 11 ಸಕ್ಕರೆ ಕಾರ್ಖಾನೆಗಳಿಗೆ ತಾತ್ವಿಕ ಅನುಮೋದನೆ ನೀಡಿದೆ ವಿವರ ಈ ಕೆಳಕಂಡಂತೆ ಇರುತ್ತದೆ

1	ಬೀಳಗಿ ಷುಗರ್ಸ್	ಬಾಗಲಕೋಟೆ ಜಿಲ್ಲೆ
2	ಬಾದಾಮಿ ಶುಗರ್ಸ್	
3	ಭಾರತ ಶುಗರ್ಸ್	ಉತ್ತ ಕನ್ನಡ ಜಿಲ್ಲೆ
4	ಆರ್ ಕೆ ಪವರಜನ್	ಶಿವಮೊಗ್ಗ ಜಿಲ್ಲೆ

5	ಜ್ಞಾನಯೋಗಿ ಶಿವ ಕುಮಾರಸ್ವಾಮಿಜಿ ಶುಗರ್ಸ್	ಬಿಜಾಪುರ ಜಿಲ್ಲೆ
6	ಚಿಂಚೋಳಿ	ಗುಲ್ಬರ್ಗ ಜಿಲ್ಲೆ
7	ಚಿಂತಾಮಣಿ ಶುಗರ್ಸ್	ಬಿಜಾಪುರ ಜಿಲ್ಲೆ
8	ಕೇದಾರನಾಥ್ ಶುಗರ್ಸ್	ಬಾಗಲಕೋಟೆ ಜಿಲ್ಲೆ
9	ವಿಶ್ವನಾಥ್ ಶುಗರ್ಸ್	ಬೆಳಗಾಂ ಜಿಲ್ಲೆ
10	ದೇವಚಂದ್ರ ಶುಗರ್ಸ್	ಬೆಳಗಾಂ ಜಿಲ್ಲೆ
12	ಸದಾಶಿವ ಶುಗರ್ಸ್	ಬಾಗಲಕೋಟೆ ಜಿಲ್ಲೆ

ಇ) ರಾಜ್ಯದ 43 ಸಕ್ಕರೆ ಕಾರ್ಖಾನೆಗಳ ದಿನವಹಿ ಕಬ್ಬು ನುರಿಸುವ ಸಾಮರ್ಥ್ಯ ಸುಮಾರು 1 08 ಲಕ್ಷಟನ್ ಆಗಿರುತ್ತದೆ ಕಳೆದ ಹಂಗಾಮಿನಲ್ಲಿ (2202–03 ವಾಣಿವಿಲಾಸ ರಾಯಬಾಗ್ ಗೌರಿಬಿದನೂರು, ದೇಶನೂರು, ಕಂಪ್ಲಿ ಮಹದೇಶ್ವರ ಹಾಗೂ ಗಂಗಾವತಿ ಸಕ್ಕರೆ ಕಾರ್ಖಾನೆಗಳನ್ನು ಹೊರತುಪಡಿಸಿ 174 ಲಕ್ಷ ಟನ್ ಕಬ್ಬು ನುರಿಸಿ 18 78 ಲಕ್ಷ ಟನ್ ಸಕ್ಕರೆ ಉತ್ಪಾದಿಸಿದೆ ಈ 43 ಸಕ್ಕರೆ ಕಾರ್ಖಾನೆಗಳು ಒಂದು ಗಂಗಾಮಿಗೆ 180 ಲಕ್ಷ ಟನ್ ಕಬ್ಬು ನುರಿಸುವ ಸಾಮರ್ಥ್ಯ ಹೊಂದಿದ್ದು ಅದಕ್ಕೆ ಅನುಗುಣವಾಗಿ 174 ಲಕ್ಷ ಟನ್ ಕಬ್ಬು ನುರಿಸಿವೆ ಅಂದರೆ ಸಾಮರ್ಥ್ಯದ ಶೇ 96 ರಷ್ಟು ಕಬ್ಬು ನುರಿಸಿದೆ

ಈ) ರಾಜ್ಯದಲ್ಲಿ 30–11–2003 ರಲ್ಲಿ ಇದ್ದಂತೆ ಒಟ್ಟು ಸಕ್ಕರೆ ದಾಸ್ತಾನು 9 68 ಲಕ್ಷ ಟನ್ ಇದೆ

ಉ) ದಿನಾಂಕ 30–11–03 ರಲ್ಲಿ ಇದ್ದಂತೆ ಒಟ್ಟು ಕಬ್ಬು ಬಿಲ್ಲಿನ ಬಾಕಿ 2003–04 ನೇ ಸಾಲಿಗೆ ರೂ 187 07 ಕೋಟಿಗಳಷ್ಟು ಇದೆ ಇದಲ್ಲದೆ ಹಿಂದಿನ ವರ್ಷದ ಬಾಕಿ ರೂ 81 01 ಕೋಟಿ ಬಾಕಿಯು ಇದ್ದು ಸದರಿ ಬಾಕಿಯನ್ನು ತೀರಿಸಲು ಸರ್ಕಾರವು ನಿಯಮಿತವಾಗಿ ಕ್ರಮ ಕೈಗೊಂಡಿದೆ

ಊ) ರೈತರ ಬಾಕಿಯನ್ನು ಪಾವತಿಸದೇ, ಇರುವ ಸಕ್ಕರೆ ಕಾರ್ಖಾನೆಗಳಿಗೆ ನೋಟೀಸ್ ಜಾರಿ ಮಾಡಿ ಕೂಡಲೇ ಬಾಕಿ ಪಾವತಿಸುವಂತೆ ಸೂಚನೆ ನೀಡಲಾಗಿದೆ ಹಿಂದಿನ ವರ್ಷಗಳ ಬಾಕಿಯನ್ನು ಉಳಿಸಿಕೊಂಡಿರುವ ಸಕ್ಕರೆ ಕಾರ್ಖಾನಗಳಿಗೆ ಕಬ್ಬು (ನಿಯಂತ್ರಣ) ಕಾಯ್ದೆ 1986 ರ ಆದೇಶದನ್ವಯ ಭೂ ಕಂದಾಯ ಬಾಕಿಯೆಂದು ಪರಿಗಣಿಸಿ ಬಾಕಿಯನ್ನು ವಸೂಲಿ ಮಾಡಲು ಸಂಬಂಧ ಪಟ್ಟ ಜಿಲ್ಲಾಧಿಕಾರಿಗಳಿಗೆ ವಸೂಲಾತಿ ಪ್ರಮಾಣಪತ್ರ ನೀಡಿದೆ ಶ್ರೀಮಹದೇಶ್ವರ ಸಕ್ಕರೆ ಕಾರ್ಖಾನೆಯ ರೂ 1218 ಲಕ್ಷ, ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ ರೂ 864 34 ಲಕ್ಷ ಶ್ರೀ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ರೂ 4104 ಲಕ್ಷ ಹಾಗೂ ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆಯ ರೂ 361 35 ಲಕ್ಷಗಳನ್ನು ವಸೂಲಿ ಮಾಡಿ ರೈತರಿಗ ಪಾವತಿಸಲಾಗಿದೆ ಅದೇ ರೀತಿ ಗೌರಿಬಿದನೂರಿನ ಶಿರಗುಪ್ಪ ಸಕ್ಕರೆ ಕಾರ್ಖಾನೆ ಅಳಂದ, ರಾಯಬಾಗ್, ಭಾಗ್ಯಲಕ್ಷ್ಮಿ ಹಾಗೂ ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯ ರೈತರಿಗೆ ಪಾವತಿಸಬೇಕಾದ ಬಾಕಿಗೆ ವಸೂಲಾತಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ನೀಡಿದ್ದು ವಸೂಲಾತಿ ಪ್ರಕ್ರಿಯೆ ಮುಂದುವರೆದಿದೆ ಈ ಕುರಿತು ಪ್ರಕರಣಗಳು ನ್ಯಾಯಾಲಯದಲ್ಲಿರುವುದರಿಂದ ವಸೂಲಾತಿ ಪ್ರಕ್ರಿಯೆ ನಿಧಾನವಾಗಿದೆ ದಿನಾಂಕ 30–11–2003 ರಲ್ಲಿದ್ದಂತೆ ಕಾರ್ಖಾನೆವಾರು ಕಬ್ಬು ಬೆಳೆ ಬಾಕಿ ವಿವರ ಅನುಬಂಧ–1 ರಲ್ಲಿ ಲಗತ್ತಿಸಿದೆ ಮುಂದುವರೆದು ಸರ್ಕಾರವು ಕೂಡ ಬಾಕಿ ಉಳಿಸಿಕೊಂಡಿರುವ

ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಲೆ ಬಾಕಿ ಪಾವತಿಸಲು ಅನುಕೂಲವಾಗುವಂತೆ ಸಕ್ಕರೆಯನ್ನು ರಫ್ತು ಮಾಡಲು ಉತ್ತೇಜನ ನೀಡುತ್ತಿದ್ದು, ಹೀಗೆ ರಫ್ತು ಮಾಡಿದ ಪ್ರತಿಭಟನೆ ಸಕ್ಕರೆಗೆ ರೂ 1000 ದಂತೆ ರಫ್ತು ಸಹಾಯಧನವನ್ನು ನೀಡುತ್ತಿದೆ ಹಾಗೂ ಕೆಲವು ಸಂದರ್ಭಗಳಲ್ಲಿ ಹಲವು ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಮೃದು ಸಾಲಗಳನ್ನು ಕೂಡ ನೀಡಿ ಕಬ್ಬು ಬೆಲೆ ಪಾವತಿಗೆ ಕ್ರಮ ಕೈಗೊಳ್ಳಲಾಗಿದೆ

Annexure - I

Statement showing cane price arrears position as on 30-11-2003

Season 2003-04 (Rs in lakhs)

		2003-04 season				Earlier seasons		
Sl No	Name of the Factory	Cane Crushed (in lakh MT)	Amount payable	Amount paid	Balance	2002-03	2001 02	Total
1	2	3	4	5	6	7	8	9
I	Public Sector							
01	M P M Sugars	1 52	1417	114	1303	-	-	1303
02	Mysore Sugar company	1 56	1404	624	780	263	-	1043
II	Joint Sector							
03	Gangavathi	not working	-	-	-		-	-
	Sub Total II	-	-	-	-	-		-
III	Co OP Sector							
04	Bhadra	0 12	82	-	82	153	194	431
05	Bhagyalakshmi	Not working		-	-	1417	1417	
06	Bhidar	0	14	84	84	-		-
07	Dakshina Kannada	Not started			-	238		238
08	Doodgangha	1 89	1518	557	961		-	961
09	Ghatraprabha	1 14	1445	4333	912	-		912
10	Halasidda natha	0 95	759	66	693	-		693
11	Hemavathi	0 70	876	8	868	-	-	868

1	2	3	4	5	6	7	8	9
12	Hiranayakeshi	1 07	855	447	408	-	-	408
13	Karnataka	Not started			-	-54	49	103
14	Krishna	0 65	67+	399	272	-	-	272
15	Malaprabha	0 52	367	102	265	-	-	265
16	Nandi	0 57	413	413		-	-	-
17	Naranja	0 34	-	-	-	-	-	-
18	Pandavapura	Not working	-	-	-	-	-	-
19	Raibag	Not working	-		-	-	1642	1642
20	Paithara	0 48	741	130	611	-	-	611
21	SSK Aland	Not started		-	-	144	385	529
22	Sriram a	0 87	818	233	585			585
23	Vanivilasa	Not working	-	-		-	421	421
	Sub Total III	9 44	8629	2972	5657	591	4108	10356

ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ಭಾರತೀಯ ವೈದ್ಯ ಪದ್ಧತಿಯ ಹೊರ ರೋಗಿ ವಿಭಾಗ ಕುರಿತು

236 (82) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ಭಾರತೀಯ ವೈದ್ಯ ಪದ್ಧತಿಯ ಹೊರ ರೋಗಿಗಳ ವಿಭಾಗವನ್ನು ಪ್ರಾರಂಭಿಸಲಾಗಿದೆಯೇ

ಆ) ಹಾಗಿದ್ದಲ್ಲಿ ಯಾವಾಗ ಈ ವಿಭಾಗವನ್ನು ಪ್ರಾರಂಭಿಸಲಾಯಿತು

ಇ) ಆಯುರ್ವೇದ, ಹೋಮಿಯೋಪತಿ ಹಾಗೂ ಯುನಾನಿ ವೈದ್ಯರನ್ನು ಹಾಗೂ ಔಷಧಗಳನ್ನು ಈ ಹೊರ ರೋಗಿಗಳ ವಿಭಾಗಕ್ಕೆ ಒದಗಿಸಲಾಗಿದೆಯೇ

ಈ) ಈ ಆಸ್ಪತ್ರೆಯಲ್ಲಿ ಕೇಂದ್ರ ಸರ್ಕಾರದ ನೆರವಿನ ಪಂಚಕರ್ಮ ವಿಭಾಗವನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ ಎಲ್ ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು)

ಅ) ಹೌದು

ಆ) ಈ ವಿಭಾಗವನ್ನು ನವೆಂಬರ್ 2003ರಲ್ಲಿ ಪ್ರಾರಂಭಿಸಲಾಗಿದೆ

ಇ) ಇಬ್ಬರು ವೈದ್ಯರನ್ನು ಆಯುರ್ವೇದ ಹಾಗೂ ಯುನಾನಿ ಪದ್ಧತಿಗಳಲ್ಲಿ ಒಬ್ಬೊಬ್ಬರನ್ನು ಈ ವಿಭಾಗಕ್ಕೆ ನೇಮಿಸಲಾಗಿದೆ ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ಭಾರತೀಯ ವೈದ್ಯಕೀಯ ಸಂಸ್ಥೆಯಿಂದ ರೂ 8,000/– ಮೌಲ್ಯದ ಔಷಧಗಳನ್ನು ಒದಗಿಸಲಾಗಿದೆ